**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ ಇವರಲ್ಲಿ**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂ: 14**

**ಸಿ ಡಬ್ಲ್ಯೂ: 19**

| | |
|---|---|
| ಸಾಕ್ಷಿದಾರರ ಹೆಸರು | ಃ ಡಾಃ ಶ್ರೀನಿವಾಸಲು |
| ತಂದೆಯ ಹೆಸರು | ಃ ಚಿನ್ನಸುಬ್ಬರಾವ |
| ವಯಸ್ಸು | ಃ 53 ವರ್ಷಗಳು |
| ಉದ್ಯೋಗ | ಃ ವೈದ್ಯರು ಜಿಲ್ಲಾ ಆಸ್ಪತ್ರೆ ಧಾರವಾಡ |
| ವಾಸಸ್ಥಳ | ಃ ಧಾರವಾಡ |

ದಿನಾಂಕಃ 17.12.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಕಳೆದ 10 ವರ್ಷಗಳಿಂದ ನಾನು ಧಾರವಾಡ ಜಿಲ್ಲಾ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿನಾಂಕ 21.02.2022 ರಂದು ಅಪರಾಹ್ನ 12.40 ಕ್ಕೆ ತನುಜಾ ಪರಶುರಾಮ ಸುಣಗಾರ ಎಂಬ ಮಹಿಳೆಯನ್ನು ಹಲ್ಲೆ ಹಿನ್ನೆಲೆಯೊಂದಿಗೆ

ಆಕೆಯ ತಂದೆ ಪರಶುರಾಮ ಸುಣಗಾರ ಎನ್ನುವವರು ಪರೀಕ್ಷೆಗಾಗಿ ನನ್ನ ಮುಂದೆ ಹಾಜರುಪಡಿಸಿದ್ದು, ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಸೊಂಟದ ಎಡಚಪ್ಪೆಯ ಮೇಲೆ 2 x ½ x ½ ಸೆಂ.ಮೀ. ಇರಿತದ ಗಾಯ

ಈ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಸದರಿ ಗಾಯವನ್ನು ಹರಿತವಾದ ವಸ್ತುವಿನಿಂದ ಮಾಡಿದ್ದು ಗಾಯವು ತಾಜಾ ಗಾಯವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ನಿಶಾನೆ ಪಿ–17 ರ ಪ್ರಕಾರ ಗಾಯದ ಪ್ರಮಾಣ ಪತ್ರ ಕೊಟ್ಟಿದ್ದು ನನ್ನ ಸಹಿ ನಿಶಾನೆ ಪಿ–17(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 17.06.2023 ರಂದು ಒಂದು ಕೋರಿಕೆ ಪತ್ರವನ್ನು ಧಾರವಾಡ ಶಹರ ಪೋಲಿಸಠಾಣೆಯ ಸಬ ಇನ್ಸಪೆಕ್ಟರರವರು ಕಳಿಸಿದ್ದು ಅಪರಾಧ ಸಂಖ್ಯೆ 27/2022 ರಲ್ಲಿ ತನುಜಾ ಸುಣಗಾರ ಇವರಿಗೆ ಆದ ಗಾಯವು ಸೀಲು ಮಾಡಿ ಕಳುಹಿಸಿದ ಆಯುಧದಿಂದ ಆಗಬಹುದೇ ಎಂದು ಬರೆದಿದ್ದರು. ಸದರಿ ಸೀಲು ಮಾಡಿದ ವಸ್ತುವಿನ ಮೇಲೆ ಎಫಎಸಎಲ ಬೆಳಗಾವಿಯ ಸೀಲು ಇತ್ತು. ಸೀಲು ಇನಟ್ಯಾಕ್ಟ ಇತ್ತು ಅದನ್ನು ತೆರೆದು

ಆಯುಧವನ್ನು  ಪರೀಕ್ಷಿಸಿದಾಗ ಪ್ಲಾಸ್ಟಿಕ ಹ್ಯಾಂಡಲನ ಒಂದು ಚಾಕು ಇದ್ದು ಅದರ ಉದ್ದ 24 ಸೆಂ.ಮೀ , ಅಗಲ 2 ಸೆಂ.ಮೀ ಪ್ಲಾಸ್ಟಿಕ ಹ್ಯಾಂಡಲ 11 ಸೆಂ.ಮೀ ಇತ್ತು . ಕಬ್ಬಿಣದ ಭಾಗ 13 ಸೆಂ.ಮೀ ಇತ್ತು. ಅದನ್ನು ಪರೀಕ್ಷಿಸಿದಾಗ ತನುಜಾರವರಿಗೆ ಆದ ಗಾಯಗಳು ಈ ಆಯುಧದಿಂದ ಆಗಬಹುದು ಎಂದು ಅಭಿಪ್ರಾಯಕೊಟ್ಟಿದ್ದು ನನ್ನ ಅಭಿಪ್ರಾಯವನ್ನು ನಿಶಾನೆ ಪಿ–18 ಮತ್ತು ನನ್ನ ಸಹಿಯನ್ನು ನಿಶಾನೆ ಪಿ–18(ಎ) ಎಂದು ಗುರುತಿಸಲಾಯಿತು.   ಸದರಿ ಚಾಕುವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು ಅದನ್ನು ಈಗಾಗಲೇ ಎಂ ಓ .1 ಎಂದು ಗುರುತಿಸಲಾಗಿದೆ.  ಸದರಿ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.  ನಂತರ ಅದನ್ನು ಪುನಃ ನಮ್ಮ ಆಸ್ಪತ್ರೆಯ ಸೀಲನೊಂದಿಗೆ ಪ್ಯಾಕ ಮಾಡಿ ಪಿಸಿ ನಂ.2736 ಎಸ ಎನ ಬಿರಾದಾರ ರವರಿಗೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಬಿಬಿ  ವಕೀಲರಿಂದ**

ಹರಿತವಾದ ಆಯುಧದ ಮೇಲೆ ಒಬ್ಬ ವ್ಯಕ್ತಿ ಬಿದ್ದರೆ ಮೇಲೆ ಹೇಳಿದ ಗಾಯಗಳಾಗುವ ಸಾಧ್ಯತೆ ಇದೆಯಾ ಎಂದರೆ ಹೌದು.  ಅಡಿಗೆ ಮನೆಯಲ್ಲಿ ಈರುಳ್ಳಿ ಹೆಚ್ಚಲು ಇಳಿಗೆ ಮಣೆ ಇಟ್ಟಿದ್ದು ಅದರ ಮೇಲೆ ಒಬ್ಬ ವ್ಯಕ್ತಿ ಬಿದ್ದರೆ ಈ ರೀತಿಯ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

**ಓ ಹೇ ಕೇ ಸರಿ ಇದೆ.**

**ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಧಾರವಾಡ.**